## ಟೊಯೋಟಾ ಅಂಗನವಾಡಿ ಅಭಿವೃದ್ಧಿ ಕಾರ್ಯಕ್ರಮ

## Toyota Anganawadi Development Program (TADP)

# ಉತ್ತಮ ಅಭ್ಯಾಸಗಳು

# Good Habits



| S.No | ವಿಷಯಸೂಚಿ | Contents |
|---|---|---|
| 1 | ಮನೆ | Home |
| 2 | ಸಾರ್ವಜನಿಕ ಸ್ಥಳ | Public Places |
| 3 | ಇತರರಿಗೆ ಸಹಾಯ ಮಾಡುವುದು | Helping others |
| 4 | ಅಂಗನವಾಡಿಯಲ್ಲಿ ಒಳ್ಳೆಯ ನಡವಳಿಕೆಗಳು | Good Manners in Anganawadi centers |
| 5 | ಸಂಚಾರಿ ನಿಯಮಗಳು | Traffic Rules |
| 6 | ವಿನಂತಿಸು | Request |
| 7 | ಧನ್ಯವಾದಗಳು | Thank You |
| 8 | ಕ್ಷಮಿಸು | Sorry |
| 9 | ಪರಿಸರ | Environment |
| 10 | ನಮ್ಮ ದೇಶ ಮತ್ತು ಸ್ವತಂತ್ರ್ಯ ಹೋರಾಟಗಾರರನ್ನು ಗೌರವಿಸುವುದು | Respecting our Country and Freedom Fighters |
| 11 | ಒಳ್ಳೆಯ ಸ್ಪರ್ಶ ಮತ್ತು ಕೆಟ್ಟ ಸ್ಪರ್ಶ | Good Touch and Bad Touch |
| 12 | ಕೃತಜ್ಞತೆ ನಡವಳಿಕೆಗಳು | Attitude of Gratitude |






# ತಂದೆ-ತಾಯಿ ಮತ್ತು ಹಿರಿಯರನ್ನು ಗೌರವಿಸುವುದು
# Respecting our Parents and Elders



ತಂದೆ-ತಾಯಿಯರನ್ನು ದೇವರು ವರವಾಗಿ ಕೊಟ್ಟಿದ್ದಾನೆ

**Parents are god-gift**



ಪೋಷಕರು ನಮಗೆ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತಾರೆ

**Parents guide us on the right path in life**



ಹಿರಿಯರಿಗೆ 'ನಮಸ್ತೆ' ಹೇಳುವುದು ಮತ್ತು ಆಶೀರ್ವಾದ ಪಡೆಯುವುದು

**Always say 'Namaste' and take blessing from elders**



ಎದ್ದು ನಿಂತು ಹಿರಿಯರನ್ನು ವಿನಯದಿಂದ ಗೌರವಿಸಿ

**Stand up and greet the elders politely**



ಎಲ್ಲರೊಂದಿಗೆ ವಿನಯದಿಂದ ಮಾತನಾಡಿ

**Speak politely with everyone**







# ಸಾರ್ವಜನಿಕ ಸ್ಥಳ
# Public Place



ಸಂಚಾರಿ ನಿಯಮಗಳನ್ನು
ಅನುಸರಿಸಿ
**Follow the rules**



ಸಭ್ಯ ಪದಗಳನ್ನು ಬಳಸಿ
**Use polite words**




ಮಾತನಾಡುವಾಗ ಸನ್ನಿವೇಶಕ್ಕೆ
ತಕ್ಕಂತೆ 'ಧನ್ಯವಾದ',
'ದಯವಿಟ್ಟು' ಮತ್ತು 'ಕ್ಷಮಿಸಿ' ಪದಗಳನ್ನು ಬಳಸಿ

**Always use,
‘Thank You’ and ‘Please’
and ‘Sorry’ appropriately**



ಯಾವಾಗಲೂ ಕಸವನ್ನು
ಕಸದ ಬುಟ್ಟಿಯಲ್ಲೇ ಹಾಕಿರಿ
**Always put the
garbage in dustbin**



ಕೆಮ್ಮುವಾಗ ಮತ್ತು ಸೀನುವಾಗ ಕರವಸ್ತ್ರದಿಂದ
ಬಾಯಿಯನ್ನು ಮುಚ್ಚಿಕೊಳ್ಳಿ
**Cover your mouth
While sneezing and coughing**



ನಲ್ಲಿಯಲ್ಲಿ ಸುರಿಯುತ್ತಿರುವ
ನೀರನ್ನು ನಿಲ್ಲಿಸಿ ಮತ್ತು ನೀರನ್ನು ಉಳಿಸಿ
**Close the faucet and save the water**







# ಇತರರಿಗೆ ಸಹಾಯ ಮಾಡಿ
# Helping others



**ರಸ್ತೆ ದಾಟಲು ಸಹಾಯ ಮಾಡಿ**
**Help needy to cross the road**



**ವಿಶೇಷಚೇತನರಿಗೆ ಸಹಾಯ ಮಾಡಿ**
**Help the specially abled**



**ಸಹಪಾಠಿಗಳಿಗೆ ಸಹಾಯ ಮಾಡಿ**
**Help classmates**



**ಮನೆಯಲ್ಲಿ ಪೋಷಕರಿಗೆ ಸಹಾಯ ಮಾಡಿ**
**Help Parents at home**



**ಬಡವರಿಗೆ ಸಹಾಯ ಮಾಡಿ**
**Help poor people**



**ಇತರರಿಗೆ ಸಹಾಯ ಮಾಡಿ**
**Help others**

# ಅಂಗನವಾಡಿ ಕೇಂದ್ರದಲ್ಲಿ ಒಳ್ಳೆಯ ನಡವಳಿಕೆಗಳು

# Good Manners in Anganawadi Center



ಶಿಕ್ಷಕಿಯರನ್ನು ಗೌರವಿಸಿ

**Always greet teachers with respect**



ಶಿಕ್ಷಕಿಯರು ಹೇಳುವುದನ್ನು ಗಮನವಿಟ್ಟು ಕೇಳಿ

**Listen to teachers attentively**



ತರಗತಿಯಲ್ಲಿ ಉತ್ತರಿಸುವ ಮೊದಲು ಕೈ ಎತ್ತಿ ಅನುಮತಿ ಕೇಳಿ

**Raise hands in the classroom before you answer**



ಸಹಪಾಠಿಗಳ ಜೊತೆ ವಸ್ತುಗಳನ್ನು ಹಂಚಿಕೊಳ್ಳಿ

**Share things with friends**

# ಅಂಗನವಾಡಿ ಕೇಂದ್ರದಲ್ಲಿ ಒಳ್ಳೆಯ ನಡವಳಿಕೆಗಳು
# Good Manners in Anganawadi Center



ಆಹಾರವನ್ನು ಚೆಲ್ಲಬೇಡಿ

**Do not spill food**



ಹೊರಡುವ ಮುಂಚೆ ಹೋಗಿ ಬರುವುದಾಗಿ ಹೇಳಿ

**Say good-bye before leaving**



ಸಹಾಯ ಮಾಡಿದವರಿಗೆ ಧನ್ಯವಾದ ತಿಳಿಸಿ

**Say 'Thank You' to people who help you**



ಸಹಪಾಠಿಗಳನ್ನು ಹಿಯಾಳಿಸಬೇಡಿ

**Do not tease your classmates**

# ಅಂಗನವಾಡಿ ಕೇಂದ್ರದಲ್ಲಿ ಒಳ್ಳೆಯ ನಡವಳಿಕೆಗಳು

# Good Manners in Anganawadi Center



ನೀವು ಹೇಳಲು ಬಯಸುವ ಮೊದಲು
'ಕ್ಷಮಿಸಿ' ಎಂದು ಹೇಳಿ

**Use 'Excuse me' before you wish to say something**



ನಿಮ್ಮ ಸರದಿಗಾಗಿ ಕಾಯಿರಿ

**Wait for your turn in the queue**



ತಪ್ಪು ಮಾಡಿದಾಗ
'ಕ್ಷಮಿಸಿ' ಎಂದು ಹೇಳಿ

**Use 'Sorry' when you commit**



ಅನುಮತಿ ಪಡೆದು ತರಗತಿಯ
ಒಳಗೆ ಪ್ರವೇಶಿಸಿ

**Enter the class with due permission**



ಎಲ್ಲೆಂದರೆ ಅಲ್ಲಿ ಕಸವನ್ನು ಹಾಕಬೇಡಿ

**Do not litter**







# ಒಳ್ಳೆಯ ಅಭ್ಯಾಸಗಳು
# Good Habits



**ಬೆಳಗ್ಗೆ ಬೇಗನೆ ಏಳಿ**
**Get up early in the morning**



**ಪ್ರತಿದಿನ ಎರಡು ಬಾರಿ ಹಲ್ಲುಗಳನ್ನು ಉಜ್ಜಿ**
**Brush your teeth twice a day**



**ಪ್ರತಿದಿನ ಸ್ನಾನ ಮಾಡಿ**
**Take bath everyday**



**ಆರೋಗ್ಯಕರ ಆಹಾರವನ್ನು ಸೇವಿಸಿ**
**Eat healthy food**

# ಒಳ್ಳೆಯ ಅಭ್ಯಾಸಗಳು
# Good Habits




ಪ್ರತಿದಿನ ಅಂಗನವಾಡಿಗೆ ಹೋಗಿ

Go to Anganwadi every day



ಪ್ರತಿದಿನ ತಪ್ಪದೆ ಓದಿ ಮತ್ತು ಸರಿಯಾದ ಸಮಯಕ್ಕೆ ಹೋಂ ವರ್ಕ್ ಮುಗಿಸಿ

Study every day and finish your homework in time



ನಿಮ್ಮ ಕುಟುಂಬದವರೊಂದಿಗೆ ಹೆಚ್ಚಿನ ಸಮಯವನ್ನು ಕಳೆಯಿರಿ

Spend time with your family



ಆಹಾರ ಸೇವಿಸುವ ಮೊದಲು ಮತ್ತು ನಂತರ ಕೈಗಳನ್ನು ತೊಳೆಯಿರಿ

Wash hands before and after food

# ಒಳ್ಳೆಯ ಅಭ್ಯಾಸಗಳು
# Good Habits



ನಿಮ್ಮ ಕೂದಲನ್ನು
ಸದಾ ಬಾಚಿಕೊಳ್ಳಿ
**Comb your hair neatly**



ನಿಯಮಿತವಾಗಿ
ಉಗುರುಗಳನ್ನು ಕತ್ತರಿಸಿಕೊಳ್ಳಿ
**Cut your nails regularly**



ನಿಗದಿತ ಸಮಯಕ್ಕೆ
ಸರಿಯಾಗಿ ನಿದ್ರೆ ಮಾಡಿ
**Go to bed on time**



ಕೊಠಡಿಯಿಂದ ಹೊರಬರುವ
ಮೊದಲು ಲೈಟ್ ಅನ್ನು ಆಫ್ ಮಾಡಿ
**Switch off lights before leaving the room**

# ಸಂಚಾರಿ ನಿಯಮಗಳು

# Traffic Rules



ಕಾರಿನಲ್ಲಿ ಪ್ರಯಾಣಿಸುವಾಗ
ಸೀಟ್ ಬೆಲ್ಟ್ ಅನ್ನು ಕಡ್ಡಾಯವಾಗಿ ಧರಿಸಿ
Wear seat belt while
travelling in the car



ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸುವಾಗ
ಕಡ್ಡಾಯವಾಗಿ ಹೆಲ್ಮೆಟ್ ಅನ್ನು ಧರಿಸಿ
Wear helmet while travelling in the two-wheeler



ರಸ್ತೆಯನ್ನು ದಾಟುವಾಗ ಜೀಬ್ರಾ, ಕ್ರಾಸ್ ಅನ್ನು ಬಳಸಿ
Use the zebra cross while crossing the road





ಪ್ರಯಾಣಿಸುವಾಗ ತೊಂದರೆಯಾದರೆ ರಸ್ತೆ ಬದಿಯ
ಸಹಾಯವಾಣಿಯನ್ನು ಉಪಯೋಗಿಸಿಕೊಳ್ಳಿ
Use road side helpline / assistance

# ಸಂಚಾರಿ ನಿಯಮಗಳು
# Traffic Rules




ವೇಗದ ಮಿತಿಯೊಳಗೆ ವಾಹನವನ್ನು
ಚಾಲನೆ ಮಾಡುವಂತೆ ಪೋಷಕರಲ್ಲಿ ವಿನಂತಿಸಿ

Request the parents to drive
within the speed limit




ನಿಲ್ಲಿಸು
Stop

ಹೊರಡಲು ಸಿದ್ಧತೆ
Get ready

ಹೊರಡು
Go

# ವಿನಂತಿಸು

# Request



ನಾನು ನಿನ್ನ ಪೆನ್ಸಿಲ್ ಅನ್ನು ಉಪಯೋಗಿಸಬಹುದೇ?

**May I borrow your pencil?**



ನಾನು ಒಳಗೆ ಬರಬಹುದೇ?

**May I come in?**



ನಾನು ಹೊರಗೆ ಹೋಗಬಹುದೇ?

**May I go out?**



ನಾನು ನೀರನ್ನು ಕುಡಿಯಬಹುದೇ?

**May I drink water?**



ನಾನು ಶೌಚಾಲಯವನ್ನು ಬಳಸಬಹುದೇ?

**May I use toilet?**



ನಾನೂ ಇದನ್ನು ಮಾಡಬಹುದೇ?

**May I do this?**







# ಧನ್ಯವಾದಗಳು
# Thank You



ಉಡುಗೊರೆಗಾಗಿ
ಧನ್ಯವಾದಗಳು
Thank you for the gift



ಸಹಾಯಕ್ಕಾಗಿ ಧನ್ಯವಾದಗಳು
Thank you for helping



ಸಹಕಾರಕ್ಕಾಗಿ ಧನ್ಯವಾದಗಳು
Thank you for supporting



ಹಂಚಿಕೊಂಡಿದ್ದಕ್ಕಾಗಿ ಧನ್ಯವಾದಗಳು
Thank you for sharing



ತೋರಿಸಿದ್ದಕ್ಕಾಗಿ ಧನ್ಯವಾದಗಳು
Thank you for showing



ನನ್ನ ಇಷ್ಟದ ಆಹಾರದ ಅಡುಗೆಯನ್ನು
ಮಾಡಿದ್ದಾಕ್ಕಾಗಿ ಧನ್ಯವಾದಗಳು
Thank you for cooking
my favorite dish

# ಕ್ಷಮಿಸು
# Sorry



ಕ್ಷಮಿಸಿ, ನಾನು ಅದನ್ನು ಮುರಿದುಬಿಟ್ಟೆ
Sorry, I've broken it



ಓಹೋ! ಕ್ಷಮಿಸಿ,
ನಾನು ಹಾಲನ್ನು ಚೆಲ್ಲಿಬಿಟ್ಟೆ
Oops, sorry for spilling the milk



ಕ್ಷಮಿಸಿ, ನಾನು ನಿಮ್ಮನ್ನು
ನೋಯಿಸಿಬಿಟ್ಟೆ
Sorry, I hurt you

# ಪರಿಸರ

# Environment



ಮರವು ನಮಗೆ ಆಮ್ಲಜನಕವನ್ನು
ನೀಡುತ್ತದೆ. ಅದರಿಂದಲೇ ನಾವು ಜೀವಿಸುತ್ತಿದ್ದೇವೆ

Tree give us oxygen
We are alive because of them



ಹೆಚ್ಚು ಹೆಚ್ಚು ಮರಗಳನ್ನು ಬೆಳೆಸಿ

Plant more and more trees



ನೀರನ್ನು ಉಳಿಸಿ

Save water



ಅನಗತ್ಯವಾಗಿ ಹೂವುಗಳು ಮತ್ತು
ಎಲೆಗಳನ್ನು ಕೀಳಬೇಡಿ

Do not pluck flowers
and leaves unnecessary



ಸೌರಶಕ್ತಿ ಬಳಸಿ

Use solar energy

# ಕಸ ವಿಂಗಡಣೆ

# Waste segregation




**ಒಣ ತ್ಯಾಜ್ಯ:**
ಪ್ಲಾಸ್ಟಿಕ್ ಸೋಡಾ ಬಾಟಲ್, ಗಾಜು, ಮೊಸರು ಕಪ್, ಅಲ್ಯೂಮಿನಿಯಂ ಕ್ಯಾನ್, ಪ್ಲಾಸ್ಟಿಕ್ ಚೀಲಗಳು, ಚಾಕಲೇಟ್ ಅಥವಾ ಆಹಾರದ ಪೊಟ್ಟಣಗಳು, ಪೇಪರ್, ಬಟ್ಟೆ, ಇತ್ಯಾದಿಗಳು

**ಅಪಾಯಕಾರಿ:** ಬ್ಯಾಟರಿಗಳು, ಬಲ್ಬ್, ಸಿಡಿ, ಕೀಟನಾಶಕ ಪಾತ್ರೆಗಳು, ಔಷಧಿ ಬಾಟಲ್, ಮೋಟಾರ್ ಆಯಿಲ್, ಸೆಲ್ ಫೋನ್

**ನೆಲಬರ್ತಿ/ದಹನಕಾರಿ ತ್ಯಾಜ್ಯ:** ಸ್ಯಾನಿಟರಿ ನ್ಯಾಪ್ ಕಿನ್ಸ್, ಡೈಪರ್, ಉಪಯೋಗಿಸಿದ ಟಿಶ್ಯುಗಳು, ಇಯರ್ ಬಡ್.

**ಆಸ್ಪತ್ರೆ ತ್ಯಾಜ್ಯ:** ಬ್ಯಾಂಡೇಜ್, ಉಪಯೋಗಿಸಿದ ಸಿರೆಂಜ್, ಬ್ಲೇಡ್, ಇಂಜೆಕ್ಷನ್ ಟ್ಯೂಬ್.

**ಹಸಿ ತ್ಯಾಜ್ಯ:**
ಎಲ್ಲಾ ವಿಧದ ತ್ಯಾಜ್ಯ ಆಹಾರ ಪದಾರ್ಥ, ಉಪಯೋಗಿಸಿದ ಕಾಫಿ ಪುಡಿ, ಬಾಳೆಹಣ್ಣಿನ ಸಿಪ್ಪೆಗಳು, ಪೇಪರ್, ಹೂ, ಹಣ್ಣು ತರಕಾರಿ ವಸ್ತುಗಳಿಂದ ಉಂಟಾಗುವ ತ್ಯಾಜ್ಯ, ಮನೆ ಮತ್ತು ಧನದ ಕೊಠಡಿಯಿಂದ ಉತ್ಪತ್ತಿಯಾಗುವ ಕಸ, ಕೃಷಿ/ತೋಟದ ಕಸ, ಬೂದಿ. ಇತ್ಯಾದಿ

**Dry waste:**
Plastic soda bottles, glass, yogurt cups, spoons, aluminum cans, waste cloths, rubber, wood, plastic bags, chocolate/food rapper.

**Hazardous wastes:** Batteries, pesticide containers, medicine bottles, motor oil, cell phones. blade, pads.

**Sanitary waste:** Diapers/sanitary napkins, used tissues.

**Hospital waste:** Bandages, used syringes, injection vials,

**Wet waste:**
All types of used food Waste: Coffee grounds, banana peels, paper, flowers, fruits, waste material from vegetable matter, garbage generated from house and cattle room, agricultural/garden waste, ash







# ಪ್ರಾಣಿಗಳನ್ನು ನೋಡಿಕೊಳ್ಳುವುದು
# Taking care of animals



ಪ್ರಾಣಿಗಳಿಗೆ ತೊಂದರೆ ಕೊಡಬಾರದು
**Don’t disturb animals**



ಪ್ರಾಣಿಗಳೊಂದಿಗೆ
ಸೌಹಾರ್ದಯುತವಾಗಿರಿ
**Be kind with animals**



ಪ್ರಾಣಿಗಳಿಗೆ ಆಹಾರ ನೀಡಿ
**Feed animals with some food**

# ಪಕ್ಷಿಗಳನ್ನು ನೋಡಿಕೊಳ್ಳುವುದು
# Taking care of Birds



ಬೇಸಿಗೆಯಲ್ಲಿ ಪಕ್ಷಿಗಳಿಗೆ ಅನುಕೂಲಕರ
ಸ್ಥಳಗಳಲ್ಲಿ ನೀರಿನ ಬಟ್ಟಲುಗಳನ್ನು
ಇಡುವುದು

**Keep bowls of water at convenient places for birds during summer**



ಪಕ್ಷಿಗಳಿಗೆ ತೊಂದರೆ ಕೊಡಬಾರದು

**Don’t disturb to birds**



ಪಕ್ಷಿಗಳಿಗೆ ಆಹಾರ ನೀಡುವುದು

**Feed some food for birds**

# ನಮ್ಮ ದೇಶ ಮತ್ತು ಸ್ವತಂತ್ರ ಹೋರಾಟಗಾರರನ್ನು ಗೌರವಿಸುವುದು

# Respecting our Country and Freedom Fighters



ಭಗತ್ ಸಿಂಗ್



ಸುಭಾಷ್ ಚಂದ್ರ ಬೋಸ್



ಬಾಲಗಂಗಾಧರ್ ತಿಲಕ್

**ನಮ್ಮ ಸ್ವಾತಂತ್ರ್ಯ ಹೋರಾಟಗಾರರು ನಮಗಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ್ದಾರೆ ಮತ್ತು ನಾವು ಅವರ ತ್ಯಾಗವನ್ನು ಮರೆಯಬಾರದು.**

**ಭಾರತದ ಕೆಲವು ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರೆಂದರೆ ಮಹಾತ್ಮ ಗಾಂಧಿ, ಭಗತ್ ಸಿಂಗ್, ಚಂದ್ರಶೇಖರ್ ಆಜಾದ್, ಸುಭಾಷ್ ಚಂದ್ರ ಬೋಸ್, ಝಾನ್ಸಿರಾಣಿ ಲಕ್ಷ್ಮಿಬಾಯಿ, ಬಾಲಗಂಗಾಧರ್ ತಿಲಕ್.**

**Our freedom fighters sacrificed their lives for us and we shouldn't forget their sacrifice.**

**Some of the famous India freedom fighters were Mahatma Gandhi, Bhagat Singh, Chandrashekar Azad, Subhas Chandra Bose, Balagangadhar Tilak, Jhansi Rani Lakshmibhai.**



ಚಂದ್ರಶೇಖರ್ ಆಜಾದ್,



ಝಾನ್ಸಿರಾಣಿ ಲಕ್ಷ್ಮಿ ಬಾಯಿ



ಮಹಾತ್ಮ ಗಾಂಧಿ







# ರಾಷ್ಟ್ರೀಯ ಚಿಹ್ನೆಗಳು
# National Symbols

**ನಮ್ಮ ರಾಷ್ಟ್ರೀಯ ಚಿಹ್ನೆಗಳು ಅತ್ಯಂತ ಮಹತ್ವದ್ದಾಗಿವೆ. ಏಕೆಂದರೆ ಅವುಗಳು ರಾಷ್ಟ್ರದ ಇತಿಹಾಸ, ಸಂಸ್ಕೃತಿ, ಮೌಲ್ಯಗಳು ಮತ್ತು ಕನಸುಗಳನ್ನು ಪ್ರತಿನಿಧಿಸುತ್ತವೆ.**

**Our National Symbols are most important because they represent the history, culture, values and dreams of a nation.**



**ನಮ್ಮ ರಾಷ್ಟ್ರೀಯ ಲಾಂಛನ**
**Our National Emblem**



**ನಮ್ಮ ರಾಷ್ಟ್ರಧ್ವಜ**
**Our National Flag**

# ಒಳ್ಳೆಯ ಸ್ಪರ್ಶ
# Good Touch

**ಯಾರಾದರೂ ನಿಮ್ಮನ್ನು ಸ್ಪರ್ಶಿಸಿದಾಗ ಮತ್ತು ಅದು ನಿಮಗೆ ಸುರಕ್ಷಿತ, ಸಂತೋಷ ಮತ್ತು ಕಾಳಜಿಯ ಭಾವನೆಯನ್ನು ಉಂಟುಮಾಡಿದಾಗ ಅದನ್ನು ಉತ್ತಮ/ಒಳ್ಳೆಯ ಸ್ಪರ್ಶ ಎಂದು ಕರೆಯಲಾಗುತ್ತದೆ. ಉದಾ:**

**When someone touches you and it makes you feel safe, secure, happy and cared for is called a good touch. Ex:**



**ಪೋಷಕರು ನಿಮ್ಮನ್ನು ಅಪ್ಪಿಕೊಳ್ಳುವುದು**
**Hugs from your parents**



**ನಿಮ್ಮ ಸ್ನೇಹಿತರು ನಿಮಗೆ ಹೈ-ಫೈವ್ ಮಾಡುವುದು**
**Giving high-five to your friends**



**ಅಜ್ಜ-ಅಜ್ಜಿಯರು ನಿಮಗೆ ಮುತ್ತು ಕೊಡುವುದು**
**Kisses from your grandparents**



**ನೀವು ಖಾಯಿಲೆ ಬಿದ್ದಾಗ ನಿಮ್ಮ ದೇಹವನ್ನು ಪರೀಕ್ಷಿಸಲು ವೈದ್ಯರು ಸ್ಪರ್ಶಿಸುವುದು**
**Doctor touching to examine your body**

# ಕೆಟ್ಟ ಸ್ಪರ್ಶ
# Bad Touch

**ನಿಮಗೆ ದುಃಖವಾಗುವ, ಅನಾನುಕೂಲತೆ, ಕೊಳಕು, ಗೊಂದಲ, ಅಸುರಕ್ಷಿತ ಅಥವಾ ಭಯವನ್ನುಂಟು ಮಾಡುವ ರೀತಿಯಲ್ಲಿ ಯಾರಾದರೂ ನಿಮ್ಮನ್ನು ಸ್ಪರ್ಶಿಸಿದಾಗ ಅದು ಕೆಟ್ಟ ಸ್ಪರ್ಶವಾಗಿರುತ್ತದೆ.**

**When someone touches you in a way that makes you feel sad, uncomfortable, dirty, confused, unsafe or scared then it's a bad touch. A touch that you don't like.**



**ಒದೆಯುವುದು**
**Kicking**



**ಚಿವುಟುವುದು**
**Pinching**



**ಯಾರೋ ನಿಮ್ಮನ್ನು ಬೆದರಿಸುವುದು**
**Someone bullying you**



**ಹೊಡೆಯುವುದು**
**Hitting**



**ಬೇರೆ ಯಾರಾದರು ನಿಮ್ಮ ದೇಹದ ಗೌಪ್ಯ/ಗುಪ್ತ ಅಂಗಗಳನ್ನು ಮುಟ್ಟುವುದು**
**Someone touches your private body parts**

# ನೀವು ಯಾರಿಗೆ ಹೇಳಬಹುದು?
# Who can you tell?



ಯಾರಾದರೂ ನಿಮಗೆ ಕೆಟ್ಟದಾಗಿ ಸ್ಪರ್ಶಿಸಿದರೆ ನೀವು "ಬೇಡ, ಮುಟ್ಟುವುದನ್ನು ನಿಲ್ಲಿಸಿ, ಹಿಂತಿರುಗಿ" ಎಂದು ಹೇಳಿ ಅಥವಾ "ನನಗೆ ಅದು ಇಷ್ಟವಿಲ್ಲ" ಅಥವಾ ನನ್ನನ್ನು ಆ ರೀತಿಯಲ್ಲಿ ಮುಟ್ಟಬೇಡ". ಎಂದು ಹೇಳಿ. ಮತ್ತು ನಿಮಗೆ ಪ್ರೀತಿಪಾತ್ರರಾಗಿರುವ ಯಾರಿಗಾದರೂ ಹೇಳಿ."

**If someone gives you a bad touch, you say "No, stop it, back off" or "I don't like that" or don't touch me that way" say that. Tell someone you trust."**



**ಯಾರಾದರೂ ನಿಮ್ಮನ್ನು ಕೆಟ್ಟದಾಗಿ ಸ್ಪರ್ಶಿಸಿದರೆ ಇವರಿಗೆ ಹೇಳಬೇಕು:**

**If someone gives you a bad touch then you should tell**

- ತಂದೆ-ತಾಯಿಯರು / Parents
- ಅಜ್ಜ-ಅಜ್ಜಿಯರು / Grandparents
- ಶಿಕ್ಷಕರು ಅಥವಾ ಇತರೆ ನಂಬಿಕೆಯುಳ್ಳ ಹಿರಿಯರು / Teachers or others trusted adults



# ಕೃತಜ್ಞತೆ ನಡವಳಿಕೆ
# Attitude of Gratitude



ಧನ್ಯವಾದ ದೇವರೇ, ನನಗೆ
ಇಷ್ಟವಾದ ಆಹಾರ ಕೊಟ್ಟಿದ್ದಕ್ಕಾಗಿ

Thank you god, for my favourite food



ಧನ್ಯವಾದ ದೇವರೇ, ನನ್ನನ್ನು
ನಗುವಂತೆ ಮಾಡಿದಕ್ಕಾಗಿ

Thank you god, making me laugh



ಧನ್ಯವಾದ ದೇವರೇ  ನನಗೆ ಒಳ್ಳೆಯ ಸ್ನೇಹಿತ/ತೆ ಸಿಕ್ಕಿದ್ದಕ್ಕಾಗಿ

Thank you god, for giving me a good friend

# ಕೃತಜ್ಞತೆ ನಡವಳಿಕೆ
# Attitude of Gratitude



ಧನ್ಯವಾದ ದೇವರೇ, ನನ್ನ ಇಷ್ಟವಾದ
ಆಟಿಕೆ  ನನಗೆ ಸಿಗುವಂತೆ ಮಾಡಿದ್ದಕ್ಕಾಗಿ

**Thank you god, I found my favorite toy**



ಧನ್ಯವಾದ ದೇವರೇ! ಯಾರೋ
ನನಗೆ ಇಂದು ಸಹಾಯ ಮಾಡಿದ್ದಕ್ಕಾಗಿ

**Thank you god, someone helped me today**



ಧನ್ಯವಾದ ದೇವರೇ, ನಾನು ಒಳ್ಳೆಯ ಪೋಷಕರನ್ನು ಪಡೆದಿದ್ದಕ್ಕಾಗಿ

**Thank you god, having good parents for me**







**For more information, contact:**

## Toyota Kirloskar Motor Pvt Ltd

**tkm.csr@toyota-kirloskar.co.in**

**Developed by SNEHA**

**ed.snehango@gmail.com**

**www.sneha-ngo.org**





